ಮೂಲತಃ ಶಿವಮೊಗ್ಗೆಯ ಸೆರಗಿನ ಗಾಡಿಕೊಪ್ಪದವರಾದ ಕಂನಾಡಿಗಾ ನಾರಾಯಣ, ಇತಿಹಾಸ, ರಾಜ್ಯಶಾಸ್ತ್ರ, ಇಂಗ್ಲಿಷ್ ಹಾಗೂ ಕಾನೂನು ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರು. ಕಥೆ ಮತ್ತು ಕಾದಂಬರಿಗಳು ಅವರ ಮುಖ್ಯ ಅಭಿವ್ಯಕ್ತಿ ಮಾಧ್ಯಮಗಳು. 'ಮಂಡಲ', 'ಹಸಿರು ಕಣ್ಣಿನ ಹುಡುಗಿ, 'ತಲ್ಲಣದ ಆ ಕ್ಷಣ', 'ಇಹದ ಪರಿಮಳ'ಗಳಂಥ ಎಂಟು ಕಥಾಸಂಕಲನ, 'ಕಾಂಡ', 'ದ್ವಾಪರ' ಎಂಬ ಕಾದಂಬರಿಗಳನ್ನು ಬರೆದಿದ್ದಾರೆ. 'ಮಹಾವೃಕ್ಷ', 'ಬುದ್ಧಯಾನ' ಕಾದಂಬರಿಗಳು 'ಸುಧಾ'ದಲ್ಲಿ ಧಾರಾವಾಹಿಯಾಗಿ ಮೂಡಿಬಂದಿವೆ. ಪ್ರಸ್ತುತ ಲೋಕೋಪಯೋಗಿ ಇಲಾಖೆಯಲ್ಲಿ ಮುಖ್ಯ ಲೆಕ್ಕಾಧಿಕಾರಿ.

ಹಸುಕಂದನನ್ನು ಹೊತ್ತುಕೊಂಡು ಅತ್ತ ತವರು ಮನೆಗೂ ಹೋಗಲಾರದೇ, ಇತ್ತ ಗಂಡನ ಮನೆಗೂ ಹಿಂದಿರುಗಲಾರದ ಸ್ಥಿತಿಯಲ್ಲಿ ಅಲ್ಲೇ ರಾತ್ರಿಯನ್ನು ಕಳೆದೆವು. ಗಂಡನೂ ಜೊತೆಗಿದ್ದುದರಿಂದ ಸ್ವಲ್ಪ ಧೈರ್ಯವೇನೋ ಇತ್ತು. ಆದರೆ ಕಾಡುಪ್ರಾಣಿಗಳ ಉಪಟಳ ನಿವಾರಣೆಯ ಜವಾಬ್ದಾರಿಯನ್ನು ಗಂಡನ ಮೇಲೆ ಹಾಕಿ, ಕೆಲ ಕಾಲ ಸಂತೃಪ್ತಿಯಾಗಿ ನಿದ್ದೆ ಮಾಡಿ ದಣಿವಾರಿಸಿಕೊಂಡೆ.

ಮರುದಿನ, ಅರ್ಧಕ್ಕಿಂತಲೂ ಹೆಚ್ಚು ದೂರವಿರುವ ತವರುಮನೆಗೆ ಈ ಸ್ಥಿತಿಯಲ್ಲಿ ತೆರಳುವುದು ತರವಲ್ಲವೆಂದು, ತಿರುಗಿ ಗಂಡನ ಮನೆಗೇ ಹಿಂದಿರುಗುವುದೆಂದು ನಿರ್ಧರಿಸಿದೆವು. ಸುಮ್ಮನೆ ಇರಲಾರದೇ ಇಂಥ ವ್ಯಸನಕ್ಕೆ ಈಡಾದ ಬಗ್ಗೆ ಪಶ್ಚಾತ್ತಾಪದಿಂದ ಬೆಂದೆ. ಹಸಿಬಾಣಂತಿಯಾದರೂ ಅನಿವಾರ್ಯವಾಗಿ ನಡೆಯಲೇಬೇಕಾದ್ದರಿಂದ ಗಂಡನೊಂದಿಗೆ ನಿಧಾನಕ್ಕೆ ಹೆಜ್ಜೆ ಹಾಕಲಾರಂಭಿಸಿದ್ದೆ. ಹೇಗೋ ಮನೆ ಸೇರಿ ಅಕ್ಕಪಕ್ಕದ ಹಿರಿಯ ಹೆಂಗಸರಿಂದೆಲ್ಲ ವಾಚಾಮಗೋಚರವಾಗಿ ಬೈಸಿಕೊಂಡು ವಿಶ್ರಾಂತಿ ಪಡೆದೆ. ಪಾಪ! ಅವರೇ ತಾಯಿಯ ಪ್ರೀತಿಯನ್ನು ಧಾರೆಯೆರೆದು ಬಾಣಂತಿಗೂ ಮಗುವಿಗೂ ಮೀಯಿಸಿ, ಸಾಂಬ್ರಾಣಿ ಹೊಗೆ ಹಾಕಿ ಸಲಹಿದರು.

ಅದಾಗಿ ಕೆಲದಿನ ನನ್ನಿಂದ ಏನನ್ನೂ ದುಡಿಯಲು ಸಾಧ್ಯವಿಲ್ಲವೆಂದಾಯಿತೋ, ಆಗ ದುಡಿದು ಮನೆಗೆ ಅನ್ನಾಹಾರ ತರಲಾರಂಭಿಸಿದ. ಸದ್ಯ, ಈಗಲಾದರೂ ಜವಾಬ್ದಾರಿ ಬಂತಲ್ಲ ಎಂದು ಸಮಾಧಾನವಾದರೂ, ದುಡಿಮೆಯ ಪ್ರಮಾಣ ತೃಪ್ತಿಕರವಾಗಿರಲಿಲ್ಲ.

ಮತ್ತೆ ಎರಡು ವರ್ಷಗಳು ಹಾಗೆ ಸರಿದುಹೋದವು. ಬದುಕು ಮತ್ತೆ ಪುನರಾವರ್ತನೆಯಾಯಿತು. ಮತ್ತೆ ಬಸುರಿಯಾದೆ. ಮತ್ತೆ ತವರಿನ ಬಯಕೆ ತೀವ್ರವಾಗಲಾರಂಭಿಸಿತು– ಅದು ಬಸುರಿಯ ಬಯಕೆಯೇನೋ ಎಂಬಂತೆ. ಹೆಣ್ಣಿಗೆ ತವರಿನ ಸೆಳೆತ ಬಸುರಿಯಾದಾಗಲೇ ಹೆಚ್ಚೇನೋ ಗೊತ್ತಿಲ್ಲ!

ಗಂಡನೊಡನೆ ಮತ್ತೆ ಜಗಳ. ಈ ಸಲ ಹೇಗಾದರೂ ಮಾಡಿ ಮೊದಲೇ ತವರಿಗೆ ಕರೆದೊಯ್ದು ಬಿಡುವಂತೆ ಕೇಳಿಕೊಂಡೆ. ಈಗಾಗಲೇ ಇರುವ ಗಂಡುಮಗುವಿನ ಮುಖ ನೋಡುತ್ತಿದ್ದಂತೆಯೇ, ಮತ್ತೆ ಗರ್ಭಿಣಿಯಾಗಿರುವುದನ್ನು ನೋಡುತ್ತಿದ್ದಂತೆಯೇ ತವರಿನ ಸಿಟ್ಟು ಉಪಶಮನವಾಗಿ ಹೋಗುತ್ತದೆ ಎಂದು ಆತನ ಮನವೊಲಿಸಿದೆ. ಅಷ್ಟರಲ್ಲಿ ಒಂದಷ್ಟು ದುಡಿದು ಈ ಬಾರಿಯಾದರೂ ಗಾಡಿ ಮಾಡಿ ತವರಿಗೆ ಕರೆದೊಯ್ಯುವಂತೆ ಕೇಳಿಕೊಂಡೆ. ಆಗಲಿ ಎಂದು ದುಡಿಯಲಾರಂಭಿಸಿದ. ಆದರೆ ಆತ ದುಡಿದು ತರುತ್ತಿದ್ದುದು ಬರೀ ತುತ್ತಿನ ಚೀಲಗಳನ್ನು ತುಂಬಲೇ ಸಾಕಾಗುತ್ತಿರಲಿಲ್ಲ. ಆದರೆ ದುಡಿದು ಬರುವಾಗ ಮಗುವಿನ ನಾಲಿಗೆ ತಿದ್ದಲು ಜೇನುತುಪ್ಪವನ್ನೂ, ಕಾರೆ-ಬೋರೆ ಹಣ್ಣುಗಳನ್ನೂ ಯಥೇಚ್ಛವಾಗಿ ಹೊತ್ತು ತರುತ್ತಿದ್ದ. ಅದಕ್ಕಿಂತಲೂ ಇನ್ನೆಂಥ ಹೆಚ್ಚಿನ ಪ್ರೀತಿಯನ್ನು ಆತನಿಂದ ನಿರೀಕ್ಷಿಸಲು ಸಾಧ್ಯ? ಕುಟುಂಬದವರು ಹುಡುಕಿದ್ದವನನ್ನು ಮದುವೆಯಾಗಿದ್ದರೆ ನನಗಾದರೂ ಯಾಕಿಂಥ ಗತಿ ಬರುತ್ತಿತ್ತು. ಪ್ರೀತಿ, ಪ್ರೇಮ, ಪ್ರಣಯವೆಂಬ ಯಾವ ಆದರ್ಶಗಳೂ ಇಲ್ಲದಿದ್ದರೂ ಆ ಕ್ಷಣದ ಆಕರ್ಷಣೆಗೆ ಒಲಿದು ನನ್ನ ಬದುಕನ್ನೇ ಹಾಳು ಮಾಡಿಕೊಂಡುಬಿಟ್ಟೆ.

ಹಿಂದಿನಂತೆಯೇ ಈ ಬಾರಿಯೂ ನಡೆದೇ ಹೋಗುವುದು, ದಾರಿಯಲ್ಲಿ ಹೆರಿಗೆ ನೋವು